**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಪಾವಗಡ**

**ಸಿಸಿ ನಂ.671/2014**

ಚಾಸಾ : 1

ಪ್ರಾಸಾ : 2

**ದಿನಾಂಕಃ 21-6-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

| | |
|---|---|
| ಹೆಸರು | ರಮ್ಯ |
| ಗಂಡನ ಹೆಸರು | ರವಿಪ್ರಕಾಶ್ |
| ವಯಸ್ಸು | 30 |
| ವೃತ್ತಿ | ವ್ಯಾಪಾರ |
| ವಾಸ ಸ್ಥಳ | ಪಾವಗಡ |

**ಕಲಂ 299 ಸಿಆರ್ ಪಿಸಿ ರೀತ್ಯಾ ಮುಖ್ಯ ವಿಚಾರಣೆ : ಮಾನ್ಯ ಎ ಪಿ ಪಿ ಯವರಿಂದಃ**

ದಿಃ 26-5-2009 ಹಾಗೂ ದಿಃ 27-5-2009 ರಂದು ನನ್ನ ಮತ್ತು 1 ನೇ ಆರೋಪಿಯ ಮದುವೆ ಪಾವಗಡದ ಹಳೆಯ ಎಸ್ ಎಸ್ ಕೆ ಛತ್ರದಲ್ಲಿ ನೆರವೇರಿರುತ್ತದೆ. ನಮ್ಮ ನಿಶ್ಚಿತಾರ್ಥದ ನಂತರ 1 ನೇ ಆರೋಪಿ ಮತ್ತು ಆತನ ತಾಯಿ ವರದಕ್ಷಿಣೆಯಾಗಿ ರೂ.50,000/- ಹಣ , ಒಂದು ಉಂಗುರ ಮತ್ತು ಒಂದು ವಾಚನ್ನು ನೀಡುವಂತೆ ಕೇಳಿರುತ್ತಾರೆ . ಸದರಿ ರೂ.50,000/- ಹಣ , ಒಂದು ಉಂಗುರ ಮತ್ತು ಒಂದು ವಾಚನ್ನು 1 ನೇ ಆರೋಪಿ ಮತ್ತು ಅವರ ತಾಯಿಗೆ ಮದುವೆ ಸಮಯದಲ್ಲಿ ನೀಡಲಾಗಿರುತ್ತದೆ . ಮದುವೆಯಾದ 8 ತಿಂಗಳವರೆಗೆ ನಾನು 1 ನೇ ಆರೋಪಿ ಜೊತೆ ಸದರಿಯವರ ಹಿಂದೂಪುರದ ಮನೆಯಲ್ಲಿ ವಾಸ ಮಾಡಿರುತ್ತೇನೆ . ನಂತರ ನನ್ನನ್ನು ಹೆರಿಗೆಗೆಂದು ನನ್ನ ತವರು ಮನೆಗೆ ಕಳುಹಿಸಲಾಗಿರುತ್ತದೆ . ನನಗೆ ಹೆಣ್ಣು ಮಗು ಜನಿಸಿದ್ದರಿಂದ , ಹೆಣ್ಣು ಮಗುವಾಗಿರುತ್ತದೆ ಎಂದು ಹೇಳಿ ನನ್ನ ಗಂಡ ರವಿಪ್ರಕಾಶ್ ಮತ್ತು ನನ್ನ ಅತ್ತೆ ನನಗೆ ಹೊಡೆದು ಬಡಿದು ಮಾಡಿರುತ್ತಾರೆ .

ಮಗು ಜನಿಸಿ 1 ತಿಂಗಳಾದರೂ ಸಹ 1 ನೇ ಆರೋಪಿ ನನ್ನನ್ನು ತನ್ನ ಮನೆಗೆ ಕರೆದುಕೊಂಡು ಹೋಗಿರುವುದಿಲ್ಲ . ನಂತರ ನಾನು ಮಗು ಜನಿಸಿದ 1 ವರ್ಷದ ಒಳಗೆ 1 ನೇ ಆರೋಪಿಯ ಹಿಂದೂಪುರ ಮನೆಗೆ ಹೋಗಿರುತ್ತೇನೆ . ಸದರಿ ಮನೆಯಲ್ಲಿಯೂ ನನ್ನ ಅತ್ತೆ ಮತ್ತು ನನ್ನ ಗಂಡ ನನಗೆ ಹೊಡೆದು ಬಡಿದು ಮಾಡಿ , ನನಗೆ ಕಿರುಕುಳ ನೀಡಿರುತ್ತಾರೆ . ನಂತರ ನಾನು ನನ್ನ ತಾಯಿ ಮನೆಗೆ ವಾಪಸ್ಸು ಬಂದಿರುತ್ತೇನೆ .

ನನ್ನ ತಾಯಿಮನೆಗೆ ಬಂದ ನಂತರ ನಾನು ನನ್ನ ಗಂಡ ಹಾಗೂ ನನ್ನ ಅತ್ತೆ ವಿರುದ್ಧ ದೂರನ್ನು ದಾಖಲಿಸಿರುತ್ತೇನೆ . ದೂರನ್ನು ನೀಡಿದ ನಂತರ ಪೋಲಿಸರು ನಾನು ವಾಸವಿದ್ಧ ನನ್ನ ತಾಯಿ ನಾಗಮ್ಮನವರ ಮನೆಗೆ ಬಂದು ವಿಚಾರಣೆ ಮಾಡಿರುತ್ತಾರೆ . ವಿಚಾರಣೆ ವೇಳೆ ನನ್ನ ತಾಯಿ , ಮೂರ್ತಿ , ನಯಾಜ್ ಉಲ್ಲಾ ರವರು ಇದ್ದರು . ಆ ಸಮಯದಲ್ಲಿ ಪೋಲಿಸರು ನಮ್ಮ ಮದುವೆಯ ಆಮಂತ್ರಣ ಪತ್ರಿಕೆಯನ್ನು ಹಾಗೂ ಮದುವೆಯ 5 ಫೋಟೋಗಳನ್ನು ನನ್ನಿಂದ ಪಡೆದುಕೊಂಡು ಮುಂದಿನ ತನಿಖೆಗಾಗಿ ಅಮಾನತ್ತು ಪಡಿಸಿಕೊಂಡಿರುತ್ತಾರೆ .

ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇರುತ್ತದೆ . ಸಾಕ್ಷಿ ನೋಡಿ ಗುರುತಿಸಿದ ತನ್ನ ಸಹಿ ಇರುವ ದೂರಿನ ನೈಜಪ್ರತಿಯನ್ನು ನಿಪಿ –2 ಎಂದು ಗುರುತಿಸಲಾಯಿತು . ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇರುತ್ತದೆ . ಸಾಕ್ಷಿ ನೋಡಿ ಗುರುತಿಸಿದ ತನ್ನ ಸಹಿ ಇರುವ ಪಂಚನಾಮೆಯ ನೈಜಪ್ರತಿಯನ್ನು ಈಗಾಗಲೇ ನಿಪಿ –1 ಎಂದು ಗುರುತಿಸಲಾಗಿರುತ್ತದೆ .

**ಪಾಟೀಸವಾಲು:** ಆರೋಪಿ ಗೈರು ಹಾಜರಿದ್ದು ಪಾಟೀಸವಾಲು ಇರುವುದಿಲ್ಲ .

**ಮರು ವಿಚಾರಣೆಃ ಇಲ್ಲ .**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ.**

**ಪಿ. ಸಿ. ಜೆ. ಮತ್ತು ಜೆಎಂಎಫ್‌ಸಿ,**
**ಪಾವಗಡ.**